

ವಿಶಿಷ್ಟ ಮಹಿಳಾ ಸಾಹಿತ್ಯ ಕೃತಿಗಳ ಪ್ರಸಾರವೂ ಮುಖ್ಯ ಆದ್ಯತೆಯಾಗಬೇಕು. ಹಾಗೆಯೇ ದುರ್ಬಲ ವರ್ಗಗಳ, ಅಲೆಮಾರಿಗಳ, ಅಲಕ್ಷಿತರ, ಲಿಂಗಪರಿವರ್ತಿತರ ಸಾಹಿತ್ಯ ಕೃತಿಗಳನ್ನು ಸಾಹಿತ್ಯಸಂಸ್ಕೃತಿಯ ಕೇಂದ್ರಕ್ಕೆ ತರುವ, ಹಬ್ಬಿಸುವ ಕೆಲಸವನ್ನು ಆಯಾ ವರ್ಗಗಳು ಮಾತ್ರವಲ್ಲ, ಎಲ್ಲರೂ ಮಾಡಬೇಕಾಗುತ್ತದೆ. ಅದರ ಜೊತೆಗೇ ಪ್ರಸಾರದ ಅದೃಷ್ಟವಿರದೆ, ಯಾವಯಾವುದೋ ಕಾರಣಗಳಿಗೆ ಹಿನ್ನೆಲೆಗೆ ಸರಿದಿರುವ, ನಿಜಕ್ಕೂ ಆರೋಗ್ಯಕರವಾದ ಕೃತಿಗಳನ್ನು ಕೂಡ ಮರಳಿ ಚರ್ಚೆಗೆ ತರುತ್ತಿರಬೇಕಾಗುತ್ತದೆ.

**5**

## ಇಸವಿ 2020: ಈ ಮಹಾನ್ ಪಯಣ ಹೊರಟಿದ್ದೀಗ ಎಲ್ಲಿಗೆ?

ಹೀಗೆ ನೂರಕ್ಕೂ ಹೆಚ್ಚು ವರ್ಷಗಳ ಕಾಲ ಬಹುಬಗೆಯ ಬಂಡಾಯದ ದನಿಗಳನ್ನು ರೂಪಿಸಿರುವ ಕನ್ನಡ ಸಾಹಿತ್ಯ ಜಗತ್ತಿನ ಎಲ್ಲ ಶ್ರೇಷ್ಠ ತಾತ್ವಿಕತೆಗಳಿಗೂ, ಎಲ್ಲ ಮಾದರಿಯ ದೊಡ್ಡ ಸಾಹಿತ್ಯ ಕೃತಿಗಳಿಗೂ ತೆರೆದುಕೊಂಡಿವೆ. ಇಲ್ಲಿ ರವೀಂದ್ರನಾಥ ಟ್ಯಾಗೋರರ ಕಾದಂಬರಿಗಳ ವಿಮರ್ಶಾತ್ಮಕ ರಾಷ್ಟ್ರೀಯತೆಯೂ ಇದೆ; ಪ್ರೇಮಚಂದ್, ಮಾಂಟೋ ಕತೆಗಳು, ಪಾಬ್ಲೋ ನೆರೂಡನ ಕಾವ್ಯವೂ ಇದೆ. ಬುದ್ಧ, ಗಾಂಧಿ, ಜ್ಯೋತಿಬಾ ಫುಲೆ, ಮಾರ್ಕ್ಸ್, ಲೆನಿನ್, ಟಾಲ್‌ಸ್ಟಾಯ್, ಗಾರ್ಕಿ, ಸಿಮೊನ್ ದ ಬುವಾ, ಅಂಬೇಡ್ಕರ್, ಚೆಗುವೆರಾ, ಬ್ರೆಕ್ಟ್, ಲೋಹಿಯಾ, ಪೆರಿಯಾರ್, ಜೂಲಿಯಾ ಕ್ರಿಸ್ತೇವಾ, ಚಾಮ್‌ಸ್ಕಿ, ಅಮಾರ್ತ್ಯ ಸೇನ್ ಎಲ್ಲರೂ ಕಾಲಕಾಲಕ್ಕೆ ಕನ್ನಡಕ್ಕೆ ಬಂದಿದ್ದಾರೆ. ಈ ಎಲ್ಲರ ಚಿಂತನೆಗಳು ಕನ್ನಡ ಸಾಹಿತ್ಯ ಕೃತಿಗಳ ಮೂಲಕವೂ ಮರುಹುಟ್ಟು ಪಡೆದಿವೆ. ಕನ್ನಡ ಸಾಹಿತ್ಯ ವಿಮರ್ಶೆ ಗಂಭೀರ ಸಂಸ್ಕೃತಿ ವಿಮರ್ಶೆಯಾಗಿಯೂ ವಿಸ್ತರಿಸಿಕೊಂಡಿದೆ. ಡಿ.ಆರ್. ನಾಗರಾಜ್, ಜಿ. ರಾಜಶೇಖರ್, ರಾಜೇಂದ್ರ ಚೆನ್ನಿಯವರಂಥ ಚಿಂತಕವಿಮರ್ಶಕರು ಸುತ್ತಣ ಸಾಮಾಜಿಕರಾಜಕೀಯ ಚಳವಳಿಗಳ ಸತ್ವವನ್ನು ಆಳವಾಗಿ ಗ್ರಹಿಸುತ್ತಲೇ ಸಾಹಿತ್ಯಕೃತಿಗಳನ್ನು ಚರ್ಚಿಸಿ, ಎರಡರ ಕಾಣ್ಕೆಗಳನ್ನೂ ಒಟ್ಟಿಗೇ ಹಲವು ತಲೆಮಾರುಗಳಿಗೆ ದಾಟಿಸಿದ್ದಾರೆ. ಎಲ್ಲ ಚಳವಳಿಗಳನ್ನೂ, ಅವುಗಳ ಸಾಹಿತ್ಯ ರೂಪಗಳನ್ನೂ ವಿಮರ್ಶೆಗೆ ಒಳಪಡಿಸಿದ್ದಾರೆ. ಕಿ.ರಂ. ನಾಗರಾಜ್ ಥರದ ಸಾವಿರಾರು ಸಾಹಿತ್ಯಜೀವಿ ಅಧ್ಯಾಪಕ, ಅಧ್ಯಾಪಕಿಯರು ಎಲ್ಲ ಸಾಹಿತ್ಯ ಘಟ್ಟಗಳ ಸತ್ವಯುತ ಕೃತಿಗಳನ್ನು ಲಕ್ಷಾಂತರ ಸಹೃದಯರಿಗೆ, ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಮುಟ್ಟಿಸಿದ್ದಾರೆ. ಕನ್ನಡದ ಈ ಆಧುನಿಕೋತ್ತರ ಘಟ್ಟದಲ್ಲೂ ವಚನ ಸಾಹಿತ್ಯ, ತತ್ವಪದಗಳು ಹಾಗೂ ಮಂಟೇಸ್ವಾಮಿ, ಮಲೆಮಾದೇಶ್ವರ ಕಾವ್ಯಗಳು ಬಹುಜನ ಚಳವಳಿಯ ತಾತ್ವಿಕ ಭಿತ್ತಿಗಳನ್ನು ನಿರ್ಮಿಸಲೆತ್ನಿಸುತ್ತಿವೆ.

ಸುಮಾರು ನೂರು ವರ್ಷಗಳ ಕಾಲ ಹರಿದು ಬಂದ ಬಗೆಬಗೆಯ ಚಳವಳಿಗಳ ಪ್ರಭಾವ, ಚಹರೆಗಳನ್ನು ಹೀರಿಕೊಂಡು ಅವಕ್ಕೆ ಹೊಸ ರೂಪ ಕೊಟ್ಟಿರುವ ಜಾಗತೀಕರಣೋತ್ತರದ ಹೊಸ ರಾಜಕೀಯ ಪ್ರಜ್ಞೆಯ ಬಹು ದೊಡ್ಡ ತಂಡವೇ ಇಂದು ಕರ್ನಾಟಕದಲ್ಲಿದೆ. ಈ ಶತಮಾನದಲ್ಲಿ ಮೊಗಳ್ಳಿ ಗಣೇಶ್, ರಹಮತ್ ತರೀಕೆರೆ, ಅರವಿಂದ ಮಾಲಗತ್ತಿ, ಶಿವಸುಂದರ್, ಡಿ.ಎಸ್. ನಾಗಭೂಷಣ, ಕೋಟಿಗಾನಹಳ್ಳಿ ರಾಮಯ್ಯ, ಫಣಿರಾಜ್, ಬಂಜಗೆರೆ ಜಯಪ್ರಕಾಶ್, ದು. ಸರಸ್ವತಿ, ಹಾಗೂ ನಂತರದ ತಲೆಮಾರಿನ ವೀರಣ್ಣ ಮಡಿವಾಳರ, ಅನಸೂಯ ಕಾಂಬ್ಳೆ, ಆರೀಫ್ ರಾಜಾ, ವಿಲ್ಸನ್ ಕಟೀಲ್, ಅಕ್ಷತಾ ಹುಂಚದಕಟ್ಟೆ, ಹುಲಿಕುಂಟೆ ಮೂರ್ತಿ, ಚಂದ್ರಶೇಖರ ಐಜೂರ್, ಅರುಣ ಜೋಳದ ಕೂಡ್ಲಿಗಿ ಮುಂತಾದ ನೂರಾರು ಲೇಖಕ, ಲೇಖಕಿಯರು ತಮ್ಮ ಕ್ರಿಯೆ, ಬರವಣಿಗೆಗಳ ಮೂಲಕ ಹಲವು ಚಳವಳಿಗಳ ಅಂತಃಸ್ಸತ್ವವನ್ನು ಹಬ್ಬಿಸುತ್ತಾ ಬಂದಿದ್ದಾರೆ. ಇಂಥ ಸಾವಿರಾರು ಕೃತಿಗಳನ್ನು ಪ್ರಕಟಿಸುತ್ತಾ ಈ ಚಳವಳಿಗಳ ಕೆಲಸವನ್ನು ಮತ್ತೊಂದು ನೆಲೆಯಲ್ಲಿ ನಿರಂತರವಾಗಿ ಮುಂದುವರಿಸುತ್ತಿರುವ ಜವಾಬ್ದಾರಿಯುತ ಪ್ರಕಾಶನ ಸಂಸ್ಥೆಗಳೂ, ಡಿಜಿಟಲ್ ಬಳಗಗಳೂ ದೊಡ್ಡ ಮಟ್ಟದಲ್ಲಿ ಕರ್ನಾಟಕದಲ್ಲಿವೆ.

ಇತ್ತ ಇವೆಲ್ಲದರ ಆರೋಗ್ಯಕರ ಪರಿಣಾಮವನ್ನು ಇಲ್ಲವಾಗಿಸಲು ಕೋಮುವಾದಿ ಶಕ್ತಿಗಳು, ಕಾರ್ಪೊರೇಟ್‌ರಾಜಕೀಯಸಾಂಸ್ಕೃತಿಕ ವ್ಯವಸ್ಥೆಗಳು ಹೊಂಚುತ್ತಲೇ ಇವೆ. ಇಂಥ ಕಾಲದಲ್ಲಿಯೂ ಆಧುನಿಕ ಕನ್ನಡ ಸಾಹಿತ್ಯ ಮತ್ತು ಚಳವಳಿಗಳ ಒಂದು ಶತಮಾನದ ಅಪೂರ್ವ ನಂಟನ್ನು ಜೀವಂತವಾಗಿರಿಸಲು ಬಯಸುವ ಹೊಸ ರಾಜಕೀಯ ಪ್ರಜ್ಞೆಯ, ದಿಟ್ಟ ಜಾತ್ಯತೀತ ತಲೆಮಾರುಗಳೂ ನಮ್ಮೆದುರಿಗೇ ಸೃಷ್ಟಿಯಾಗುತ್ತಿವೆ. ಸಮಾನತೆಯ ದಿಟ್ಟ ಪ್ರತಿಪಾದಕರಾದ ಈ ಹೊಸ ತಲೆಮಾರುಗಳು ಕನ್ನಡ ಸಾಹಿತ್ಯ ಮತ್ತು ಸಾಮಾಜಿಕರಾಜಕೀಯ ಚಳವಳಿಗಳ ನಡುವಣ ಈವರೆಗಿನ ಸಂಬಂಧಗಳ ಬಗ್ಗೆ ನಡೆಸಬಹುದಾದ ಆಳವಾದ ಚರ್ಚೆಗಳು ಹಾಗೂ ಹೊಸ ಅಧ್ಯಯನಗಳು ಮುಂದೆ ಕನ್ನಡ ಸಾಹಿತ್ಯವೇ ರೂಪಿಸಬಲ್ಲ ಹೊಸದೊಂದು ಚಳವಳಿಗೆ ಹಾದಿಮಾಡಿಕೊಡಬಲ್ಲವು! ಈ ಬಗ್ಗೆ ಕನ್ನಡದ ಒಟ್ಟು ಪ್ರಜ್ಞಾವಂತ ಲೋಕ ಸ್ಪಷ್ಟತೆಯಿಂದ ಚಿಂತಿಸಿ, ಮುನ್ನಡೆಯಬೇಕಾದ ಕಾಲ ಈಗ ನಮ್ಮೆದುರಿಗಿದೆ.

ಪ್ರತಿಕ್ರಿಯಿಸಿ: feedback@sudha.co.in